release ಮಾಡುತ್ತೇವೆ. ಆ ದೃಷ್ಟಿಯಿಂದ figurers ಕೊಟ್ಟಿದ್ದೇವೆ. ಇನ್ನು ಏನು ಮಾಹಿತಿ ಕೊಡಬೇಕೋ ಅದನ್ನು ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ.

ಡಾ। ಶರಣ ಪ್ರಕಾಶ ರುದ್ರಪ್ಪ ಪಾಟೀಲ್ : ಮಾಹಿತಿ ಅಲ್ಲ, ಈ ರೀತಿ ಮಾಡುವುದಕ್ಕೆ ಸರಿ ಹೋಗದಿದ್ದರೆ ನಾವು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಅಧ್ಯಕ್ಷರು : ಮಾಹಿತಿ ಕೊಡುತ್ತೇವೆಂದು ಹೇಳಿದ್ದೀರಲ್ಲ ಬಿಡಿ. ಡಾ। ಮಾಲಕರೆಡ್ಡಿರವರ ಪ್ರಶ್ನೆಗೆ time ಕೇಳಿದ್ದಾರೆ 26ಕ್ಕೆ ಉತ್ತರ ಕೊಡಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನಾನು ತಮ್ಮನ್ನು ಕೇಳುತ್ತೇನೆ ಅವರ ಪ್ರಶ್ನೆ ಎಷ್ಟು ಪ್ರಮುಖವಾದದು ಎಂದು ತಮಗೆ ಅರ್ಥವಾಗಿದೆ. ಅದಕ್ಕೆ ಉತ್ತರ ಕೊಡುವುದಕ್ಕೆ time ಬೇಕೆಂದು ಕೇಳುತ್ತಾರೆಂದರೆ ಏನರ್ಥ ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಜಯಚಂದ್ರರವರೆ, ಸ್ವಲ್ಪ ಇಲ್ಲಿ ಕೇಳಿ. ಪ್ರಶ್ನೆ ಸರಳನೋ, ಕ್ಲಿಷ್ಟನೋ, ಕಠಿಣನೋ, ಸಿಂಪಲ್ಲೋ ಎನ್ನುವ ಪ್ರಶ್ನೆಯಲ್ಲ. ಇವರು ಕೇಳಿರುವುದು ಯಾದಗಿರಿ ಜಿಲ್ಲಾ ಕೇಂದ್ರದಲ್ಲಿರುವ ಸಾರ್ವಜನಿಕ ಕಟ್ಟಡಗಳು ನಿರ್ಮಾಣವಾಗದಿರುವ ಬಗ್ಗೆ. ಅದಕ್ಕೆ ಮಾನ್ಯ ಕಂದಾಯ ಸಚಿವರು ಉತ್ತರಿಸಬೇಕು. ನಾನು ಆಗಲೇ ಸಭೆಯ ಗಮನಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ಕೊಟ್ಟಿದ್ದೇನೆ. ಇದೇ ಸಮಯದಲ್ಲಿ ಸುಮಾರು 11 ಪ್ರಶ್ನೆಗಳು Council ನಲ್ಲಿ ಬಂದಿರುವುದರಿಂದ ಈ ಎಲ್ಲಾ ಪ್ರಶ್ನೆಗಳನ್ನು ದಯವಿಟ್ಟು ನಾಳೆ ಅಥವಾ ಸೋಮವಾರ ಹಾಕಿಕೊಳ್ಳಿ ಎಂದು ಹೇಳಿದ್ದೇವೆ. ನಾವು ಹಾಕಿಕೊಳ್ಳುತ್ತೇವೆ. ಈಗ simple answer deny ಮಾಡುತ್ತೇವೆಂದಲ್ಲ. ಸಚಿವರು ಇಲ್ಲಿ ಬರಬೇಕು ಅವರು ಬಂದ ಮೇಲೆ ನಾಳೆ ಉತ್ತರ ಕೊಡಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : Parliamentary Affairs Ministers ಗೆ ಸಾಕಷ್ಟು ಅನುಭವವಾಗಿದೆ. ಅವರು ಬರಲಿಲ್ಲವೆಂದರೆ Chief Minister ಇದ್ದಾರೆ ಅವರು ಉತ್ತರ ಕೊಡಬಹುದಾಗಿತ್ತು. ಅಥವಾ ನೀವು ಕೊಡಬಹುದಾಗಿತ್ತು. ನಿಮಗೆ entrust ಮಾಡಬಹುದಾಗಿತ್ತು. ಅಥವಾ ಅಲ್ಲಿ ಬೇರೆಯವರಿಗೆ entrust ಮಾಡಿ ಇಲ್ಲಿ ಇರಬಹುದಾಗಿತ್ತು. ಅವರೇ ಬಂದು ಉತ್ತರ ಕೊಡಬೇಕೆಂದು ಏನಿಲ್ಲ. ಸರ್ಕಾರ ಎಂದರೆ joint

responsibility and collective responsibility. ಸಭಾ ನಾಯಕರೇ ಇದ್ದಾರೆ ಅವರೇ ಉತ್ತರಿಸಬಹುದಾಗಿತ್ತು. ಅವರಿಗೆ request ಮಾಡಿಕೊಳ್ಳಬಹುದಾಗಿತ್ತು. You see ಅವರು ಇವತ್ತು ಪ್ರಶ್ನೆ ಕೇಳಿದ್ದಾರೆ. ಹೀಗಾಗಿ ಇವತ್ತು ಬಂದಿರುತ್ತಾರೆ ನಾಳೆ ಬರುತ್ತದೆಯೋ ಇಲ್ಲವೋ ಎಂದು ಅವರು ಕಾದುಕೊಂಡು ಕುಳಿತುಕೊಳ್ಳವುದಕ್ಕಾಗುತ್ತದೆಯೆ ? This is not correct. ಸರ್ಕಾರ ಆ ರೀತಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾದರೆ ಇಲ್ಲಿ ಏಕೆ ಪ್ರಶ್ನೆಗೆ ಉತ್ತರ ಕೇಳುವುದು? That is the only weapon. ಶಾಸಕರಿಗೆ ಅವರವರ ಕ್ಷೇತ್ರದ ಸಮಸ್ಯೆಯ ಬಗ್ಗೆ ಪರಿಹಾರ ಕೇಳಿಕೊಳ್ಳಲಿಕ್ಕೆ ಇದೊಂದು ಅವಕಾಶ. ಅದಕ್ಕೆ ಮಂತ್ರಿಗಳು ಬಂದು ಇಲ್ಲಿ ಉತ್ತರ ಕೊಡಲಿಕ್ಕಾಗಲ್ಲವೆಂದರೆ ಹೇಗೆ ಆಗುತ್ತದೆ ನೀವೇ ಹೇಳಿ ನೋಡೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕೇವಲ ಮಾಲಕರೆಡ್ಡಿಯವರ ಒಬ್ಬರ ಪ್ರಶ್ನೆಯಾದರೆ ನಾವು ಉತ್ತರ ಕೊಟ್ಟುಬಿಡಬಹುದು. ಇಲ್ಲಿ ಕಂದಾಯ ಸಚಿವರಿಗೆ ಆರು ಪ್ರಶ್ನೆಗಳು ಇವೆ. ಸ್ವಲ್ಪ ಗೊಂದಲವಾಗಿ Council ನಲ್ಲೂ ಅವರಿಗೆ ಪ್ರಶ್ನೆಗಳು ಬಂದಿವೆ.

ಶ್ರೀ ಸಿದ್ದರಾಮಯ್ಯ : ಇದಕ್ಕೆ ಅವರು ಜವಾಬ್ದಾರರೆ?

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಜವಾಬ್ದಾರರಲ್ಲ.

ಶ್ರೀ ಸಿದ್ದರಾಮಯ್ಯ : ಅವರು ಜವಾಬ್ದಾರರಲ್ಲ, ಹಾಗಾದರೆ ನೀವು ಜವಾಬ್ದಾರಿಯಾಗುತ್ತೀರಿ.

ಅಧ್ಯಕ್ಷರು ; ನನ್ನ ಜವಾಬ್ದಾರಿಯನ್ನು ನಾನು ನಿರ್ವಹಿಸಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : Scoring points ಬೇಡ, ಇರುವ ವಾಸ್ತವಿಕ ಪರಿಸ್ಥಿತಿಯನ್ನು ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : I want reply.

ಶ್ರೀ ಎಸ್. ಸುರೇಶ್ ಕುಮಾರ್ : ದಯವಿಟ್ಟು ಮತ್ತೊಂದು ದಿವಸ ಕಂದಾಯ ಸಚಿವರಿಂದ ಉತ್ತರ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ನಮಗೆ ಈಗ ಉತ್ತರ ಬೇಕು ಅಷ್ಟೆ. ಅಷ್ಟು ಬಿಟ್ಟರೆ ಗೊಂದಲವಾಗಿದೆ, ಈ ತರಹ ಆಗಬಾರದು. That's shows ಅದು ಸರ್ಕಾರದ ಜವಾಬ್ದಾರಿ ಇಲ್ಲ ಅಂತ.

ಶ್ರೀ ಎಸ್. ಸುರೇಶ್ ಕುಮಾರ್ : ನೋಡಿ ಸರ್ಕಾರಕ್ಕೆ ಜವಾಬ್ದಾರಿ ಇದೆ. Council ಮತ್ತು Assembly ನಡುವೆ date fix ಮಾಡುವಾಗ ಸಾಮಾನ್ಯವಾಗಿ ನಮ್ಮ Assembly dates ನೋಡಿಕೊಂಡು grouping ಅವರು ಮಾಡುತ್ತಾರೆ. ಅಲ್ಲಿ ಸ್ವಲ್ಪ ಗೊಂದಲವಾಗಿದೆ. ಅದಕ್ಕೋಸ್ಕರ ಈ ರೀತಿ ಆಗದ ಹಾಗೆ ನೋಡಿಕೊಳ್ಳುತ್ತೇವೆ ನಾಳೆ ಉತ್ತರ ಕೊಡಿಸುತ್ತೇವೆ.

ಶ್ರೀ ಸಿದ್ದಾರಾಮಯ್ಯ : ಹಾಗಾದರೆ ಈ ಸದನಕ್ಕೆ ಗೌರವ ಇಲ್ಲವೆ? ಅಲ್ಲಿಗೆ ಹೋಗಿಬಿಟ್ಟಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ನೋಡಿ "ಏತಿ ಎಂದರೆ ಪೇತಿ ಎನ್ನುವ ಲಕ್ಷಣ' ಗೊತ್ತಾಯಿತಲ್ಲ, ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಸ್ವಲ್ಪ ಗೊಂದಲವಾಗಿರುವುದ ನಿಜ ಎಂದು ಹೇಳುತ್ತಿದ್ದೇವೆ, ಅದು ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇವೆಂದು ಹೇಳಿದರೂ ಈ ರೀತಿ ಸದನಕ್ಕೆ ಗೌರವ ಇಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಸಿದ್ದರಾಮಯ್ಯ : ಮಾನ್ಯ ಸದಸ್ಯರಿಗೆ ಉತ್ತರ ಸಿಕ್ಕಿದೆಯೆ ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸದಸ್ಯರಿಗೆ ಉತ್ತರ ಕೊಡುವುದಕ್ಕಾಗಿಯೇ ನಾವು ಇನ್ನೊಂದು ದಿವಸ ಉತ್ತರ ಕೊಡಿ ಎಂದು ಕೇಳುತ್ತಿರುವುದು.

ಶ್ರೀ ಸಿದ್ದರಾಮಯ್ಯ : ನಾವು ಅವರಿಗೆ ಹೇಳುತ್ತಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾವೂ ಅವರಿಗೆ ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಾವೂ ನಿಮಗೆ ಹೇಳುತ್ತಿದ್ದೇನೆ. ಆ ತರಹ ಮಾಡುವುದಕ್ಕೆ ತಾವು ಅವಕಾಶ ಕೊಡಬಾರದು.

ಅಧ್ಯಕ್ಷರು : ಬೆಳಿಗ್ಗೆ ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಸರ್ಕಾರ ಹೇಳಿದ ಹಾಗೆ ಕೇಳಬೇಕೆಂದಿಲ್ಲ. ನೀವು ನಮ್ಮನ್ನು ರಕ್ಷಣೆ ಮಾಡುವವರು ಅಲ್ಲವೆ? ನಮ್ಮ ಹಕ್ಕುಗಳನ್ನು ರಕ್ಷಣೆ

ಮಾಡುವವರು ಯಾರು ಸ್ವಾಮಿ? ನೀವು. ನೀವು ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡಬೇಕಾಗುತ್ತದೆ. ನೀವು ಸರ್ಕಾರದ ಕಿವಿ ಹಿಂಡಬೇಕು.

ಅಧ್ಯಕ್ಷರು : ಆಮೇಲಾದರೂ ಸ್ವಲ್ಪ ಹೊತ್ತು ಬಿಟ್ಟು ಬರುವುದಕ್ಕೆ ಹೇಳಿ ನಾನು ಇದನ್ನು ಮುಂದೂಡುತ್ತೇನೆ. ಆಮೇಲೆ ತೆಗೆದುಕೊಳ್ಳೋಣವೆ?

ಶ್ರೀ ನೆ.ಲ. ನರೇಂದ್ರ ಬಾಬು : ಸನ್ಮಾನ್ಯ ಸಭಾಧ್ಯಕ್ಷರೆ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. Council and Assembly ಯಲ್ಲಿ ಒಂದೇ ದಿವಸ ಒಂದೇ ಇಲಾಖೆ ಕೊಟ್ಟರೆ ಈ ಗೊಂದಲವಾಗುತ್ತದೆ. ದಯವಿಟ್ಟು ಸ್ವಲ್ಪ ಮಾರ್ಪಾಡು ಮಾಡಿದರೆ ಅನುಕೂಲ. ಏಕಂದರೆ, ಒಂದೇ ಇಲಾಖೆಯಿದ್ದಾಗ ಮಂತ್ರಿಗಳು ಅಲ್ಲಿಯೂ ಇರುತ್ತಾರೆ. ಇಲ್ಲಿಯೂ ಇರುತ್ತಾರೆ. ಅವರು ಇಲ್ಲವೆಂದರೆ ನಾನು ಕೇಳಬೇಕಾದ ಪ್ರಶ್ನೆ ಕೇಳುವುದಕ್ಕೆ ಆಗದೇ ನಮ್ಮ ಹಕ್ಕಿಗೆ ಚ್ಯುತಿ ಆಗುತ್ತದೆ. ನಾವು ಪ್ರಶ್ನೆ ಕೇಳುವ ಅವಕಾಶದಿಂದ ವಂಚಿತರಾಗುತ್ತೇವೆ. ದಯವಿಟ್ಟು ಅದನ್ನು ಸರಿಪಡಿಸಬೇಕು.

ಶ್ರೀ ಸಿದ್ದರಾಮಯ್ಯ : ಆ ರೀತಿಯಾಗಿ ಅಲ್ಲಿ ಇದ್ದಾರೆ ಹೀಗಾಗಿ ಇಲ್ಲಿ ಉತ್ತರ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುವುದಕ್ಕಾಗಲ್ಲ.

ಅಧ್ಯಕ್ಷರು : ಡಾ। ಮಾಲಕರೆಡ್ಡಿಯವರೆ ನಾಳೆ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ ; ನೀವು ಬಹಳ ಲಘುವಾಗಿ ತೆಗೆದುಕೊಂಡಿದ್ದೀರಿ ಎಂದು ಕಾಣುತ್ತದೆ.

ಅಧ್ಯಕ್ಷರು : ಲಘುವಾಗಿ ತೆಗೆದುಕೊಂಡಿಲ್ಲ. ಬೆಳಿಗ್ಗೆಯೇ ಕರೆದು ಅವರಿಗೆ ಆಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೀವು ಕಿವಿ ಹಿಂಡಲೇ ಇಲ್ಲ ?

ಅಧ್ಯಕ್ಷರು : ನೀವು ಬಂದಿರಲಿಲ್ಲ ಬೆಳಿಗ್ಗೆನೇ ಕಿವಿ ಹಿಂಡಿ ಏನು ಹೇಳಬೇಕೋ ಅದನ್ನು ಹೇಳಿದ್ದೇನೆ. ತಾವು ಬರುವುದೇ ಲೇಟು. ಮುಂದಿನ ಪ್ರಶ್ನೆ ವಿಜಯಕುಮಾರ್.